SMT NAGAMMA C. KESHAVA MURTHY (Minister of State for Primary and Secondary Education.)

(a) Yes.

(b) This has been examined with reference to number of feeding Schools, facilities available, allocations available and other factors.

(c) More needy places have been given priority since the number of new Schools had to be limited to the finances available.

Leave of Absence

MR SPEAKER.—I have received a letter from Sri R.C. Balekundargi, Member Legislative Assembly, requesting leave of absence from attending the sittings of this House from 15th June 1982 to 30th June 1982 due to his ill-health.

Is it the pleasure of the House that permission be granted to Sri R.C. Balekundargi, Member, Legislative Assembly for remaining absent from 15th June 1982 to 30th june 1982.

(No hon. member dissented)

MR. SPEAKER.—Permission to remain absent is granted.

CALLING ATTENTION TO A MATTER OF URGENT PUBLIC IMPORTANCE

Re:-Scarcity of drinking water to Huliyurdurga Kunigal Taluk.

Mr. SPEAKER.—Hon. Member Sri D.T. Mayanna to call the attention of the Minister for Rural Development and panchayat Raj.

ಶ್ರೀ ಡಿ ಟಿ. ಮಾಯಣ್ಣ.—ಕುಣಿಗಲ್ ತಾಲ್ಲೂಕು, ಹುಲಿಯೂರು ದುರ್ಗ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆಯ ಬಗ್ಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಮಯ್ಯ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ತುಮಕೂರು ಜಿಲ್ಲಾ ಕುಣಿಗಲ್ ತಾಲೂಕು ಹುಲಿಯೂರು ದುರ್ಗ ಟೌನ್ ಪಂಚಾಯತಿ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಎರಡು ಕೊಳವೆ ಬಾವಿಗಳಿದ್ದು, ಪ್ರತಿ ಕೊಳವೆ ಭಾವಿಯು ಘಂಟೆಗೆ ೧೦೦೦ ಗ್ಯಾಲನ್‌ನಷ್ಟು ಕುಡಿಯುವ ನೀರನ್ನು ಪೂರೈಸುತ್ತದೆ. ೧೯೭೧ರ ಜನಗಣತಿ ಪ್ರಕಾರ ಈ ಪಟ್ಟಣದ ಜನಸಂಖ್ಯೆಯು ೫೫೧೯ ಇದ್ದಿತು. ಈಗಿನ ಜನಸಂಖ್ಯೆಯು ೬೭೭೫ ಎಂದು ತಿಳಿದು ಬಂದಿರುತ್ತದೆ.

ಕೇಂದ್ರ ಸರಕಾರದ ಧೋರಣೆಯಂತೆ ಪ್ರತಿ ಹಳ್ಳಿಗೂ ಕೊನೆಯ ಪಕ್ಷ ಒಂದಾದರೂ ಕುಡಿಯುವ ನೀರಿನ ಯೋಜನೆಯನ್ನು ಅಂದರೆ ನಳ್ಳಿನೀರು, ಕೊಳವೆ ಭಾವಿ ಅಥವಾ ಸೇದು ಬಾವಿ ರೂಪದಲ್ಲಿ ಕೊಡಬೇಕಾಗುತ್ತದೆ. ಸದ್ಯದ ಆರ್ಥಿಕ ಅಡಚಣೆಯಿಂದಾಗಿ ನೀರಿನ ಬಡಾವಣೆ ಯೋಜನೆಗಳನ್ನು ತೆಗೆದುಕೊಳ್ಳಲಂ ಸಾಧ್ಯವಾಗುತ್ತಾ ಇಲ್ಲ. ನಿಯಮಾವಳಿಯಂತೆ ನೀರಿನ ಬಡಾವಣೆ ಯೋಜನೆಯು ಆದ್ಯತೆಯಲ್ಲಿ ಕೊನೆಯ ಸ್ಥಾನವನ್ನು ಪಡೆದಿರುತ್ತದೆ.

ಹಣಕಾಸಿನ ಪರಿಸ್ಥಿತಿ ಸುಧಾರಣೆ ಆದ ಪಕ್ಷದಲ್ಲಿ ಹಾಗೂ ಜಿಲ್ಲಾ ಅಭಿವೃದ್ಧಿ ಮಂಡಲಿಯು ಶಿಫಾರಸು ಮಾಡಿದಲ್ಲಿ ಈ ನೀರಿನ ಬಡಾವಣೆ ಯೋಜನೆಯನ್ನು ಪರಿಶೀಲಿಸಲಾಗುವುದು.

†ಶ್ರೀ ಡಿ.ಟಿ. ಮಾಯಣ್ಣ. (ಹುಲಿಯೂರು ದುರ್ಗ).—ಮಾನ್ಯ ಮಂತ್ರಿಗಳು ಕೂಡ ಹುಲಿಯೂರುದುರ್ಗ ಟೌನ್ ನೋಡಿದ್ದೀರಿ. ಒಂದು ಪಂಚಾಯತಿಯಾಗಬೇಕಾದರೆ ೫ಸಾವಿರ ಜನಸಂಖ್ಯೆ ಇರಬೇಕೆಂದು ಮಿತಿ ಇದೆ. ಈಗ ಆಲ್ಲಿ ೧೦ ಸಾವಿರದವರೆಗೂ ಇದೆ, ಪ್ರತಿಯೊಂದು ಹಳ್ಳಿಯೂ ಸಹ ಅಭಿವೃದ್ಧಿಯಾಗುತ್ತಿದೆ. ದುರ್ಗ ಎಂದಮೇಲೆ ಒಟ್ಟಗಳ ನಡುವೆ ಇರತಕ್ಕ ಊರು. ಬೆಟ್ಟಗಳ ಮೇಲೆ ಊರು ಕಟ್ಟಿಕೊಂಡಿದ್ದಾರೆ ನೀರು ಎಲ್ಲಿಯೂ ದೊರೆಯುವುದಿಲ್ಲ. ಪಂಚಾಯತಿಯವರು ೭ದಿವಸಗಳಿಗೊಮ್ಮೆ ನೀರು ಬಿಡುತ್ತಾರೆ. ಏಳು ದಿವಸಗಳು ನೀರನ್ನು ಇಟ್ಟುಕೊಂಡು ನೀರನ್ನು ಕುಡಿಯಬೇಕೆಂದರೆ ಬಹಳ ಕಷ್ಟ. ಆ ಊರಿನ ಹಣಕಾಸಿನ ಪರಿಸ್ಥಿತಿ ಏನೇ ಇರಲಿ ದಯವಾಡಿ ಆ ಊರಿಗೆ ನೀರನ್ನು ಒದಗಿಸಿಕೊಡಬೇಕು. ಈಗಾಗಲೇ ಎಸ್ಟಿಮೇಟ್ ತಯಾರಾಗಿದೆ ಅದು ಜಿಲ್ಲಾಧಿಕಾರಿಗಳವರಿಗೆ ಹೋಗಿದೆ. ಮುಖ್ಯ ಇಂಜಿನಿಯರ್‌ರವರು ಕೂಡ ಸ್ಥಳಕ್ಕೆ ಹೋಗಿ ಅಧ್ಯಯನ ಮಾಡಿ ನೀರನ್ನು ತಕ್ಷಣ ಒದಗಿಸಿ ಕೊಡಬೇಕೆಂದು ಹೇಳಿದ್ದಾರೆ. ಒಂದು ಕೊಡ ನೀರು ತೆಗೆದುಕೊಳ್ಳಬೇಕಾದರೆ ಬಹಳ ದೂರ ಹೋಗಬೇಕು. ಆದು ಹಿಂದೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಆಗಿತ್ತಂತೆ, ಕಾಣಿಗಲ್ ಬಿಟ್ಟರೆ ಹುಲಿಯೂರು ದುರ್ಗ ಅಭಿವೃದ್ಧಿ ಹೊಂದುವುದರಲ್ಲಿದೆ. ಆದ್ದರಿಂದ ಸರ್ಕಾರ ನೀರನ್ನು ಒದಗಿಸಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರ ಕಳಕಳಿ ಅರ್ಥವಾಗಿದೆ. ನಾನು ಈಗಾಗಲೇ ಹೇಳಿದಂತೆ ಹೆಚ್ಚಿನ ನೀರಿನ ಬಡಾವಣೆಯನ್ನು ಕೇಳುತ್ತಿದ್ದಾರೆ. ಸ್ಥಳ ಪರಿಶೀಲನೆ ಮಾಡಿ ಅಧ್ಯಯನ ಮಾಡಿದ ಮೇಲೆ ಸುತ್ತಮುತ್ತ ಕೊಳವೆಬಾವಿಗಳನ್ನು ಹಾಕಿಸುವ ವ್ಯವಸ್ಥೆ ಮಾಡಲಾಗಿದೆ: ತೀವ್ರಗತಿಯಿಂದ ಪರಿಶೀಲನೆಮಾಡಿ ನೀರಿನ ಬಡಾವಣೆಯ ಯೋಜನೆಯನ್ನು ಸರ್ಕಾರ ಮಾಡಲು ಗಮನಹರಿಸುತ್ತದೆ.

ಶ್ರೀ ಡಿ.ಟಿ. ಮಾಯಣ್ಣ.—ಈಗ ಹುಲಿಯೂರು ದುರ್ಗದಲ್ಲಿ ಜೂನಿಯರ್ ಕಾಲೇಜು ಆಗಿದೆ. ಕೊಳವೆಭಾವಿ ತೊಡುವುದರಿಂದ ಏನು ಪ್ರಯೋಜನವಾಗುವುದಿಲ್ಲ. ಆದ್ದರಿಂದ ರಾಷ್ಟ್ರೀಯ ನೀರು ಸರಬರಾಜು ಯೋಜನೆಯು ಮುಖಾಂತರ ಈ ಕೆಲಸವಾಗಬೇಕು. ಊರು ಎರಡು ಬೆಟ್ಟಗಳ ನಡುವೆ ಇದೆ, ನೀರಿಗೆ ಬಹಳ ತೊಂದರೆ ಇದೆ ಆದ್ದರಿಂದ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ. ರಾಮಯ್ಯ.—ಹೊಲಿ ಯೋಜನೆ ಇದೆ, ಅದನ್ನು ಪರಿಶೀಲನೆ ಮಾಡುತ್ತೇನೆ. ಆದನ್ನು ಬೇಗ ಮಾಡಿಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳ ಮಾತನ್ನು ಕೇಳುವುದಕ್ಕೆ ಬಹಳ ಚೆನ್ನಾಗಿರುತ್ತದೆ. ಆದರೆ ಪಲಿತಾಂಶ ಏನು ಇಲ್ಲ. ಅವರ ಉತ್ತರದಲ್ಲಿ ನಿಯಮಾವಳಿಯಂತೆ ನೀರಿನ ಬಡಾವಣೆ ಯೋಜನೆಯು ಅಧ್ಯತೆಯಲ್ಲಿ ಕೊನೆಯ ಸ್ಥಾನವನ್ನು ಪಡೆದಿರುತ್ತದೆ ಅಂದರೆ ಏನಾಯಿತು ಈಗ ಕೊಡುವ ಉತ್ತರಕ್ಕೂ ಲಿಖಿತ ಉತ್ತರಕ್ಕೂ ಆಜಗಜಾಂತರ ವ್ಯತ್ಯಾಸವಿದೆ. ನಿಜವಾದಂತಹ ಪರಿಸ್ಥಿತಿಯನ್ನು ತಿಳಿಸದೆ. ಯಾವರೀತಿಯಲ್ಲಿ ಮಾಡುತ್ತೀರಿ ನನಗೆ ನಿಮಗಿಂತ ಹೆಚ್ಚಿನ ಕಳಕಳಿ ಇದೆ ನೀವು ಆ ಚಿಂತೆಯನ್ನು ಬಿಟ್ಟುಬಿಡಿ ಎನ್ನುವ ರೀತಿಯಲ್ಲಿ ನೀವು ಉತ್ತರ ಕೊಟ್ಟುಬಿಟ್ಟು ಕುಳಿತರೆ ಸಾಲದು, ಯಾವಾಗ ಮಾಡುತ್ತೀರಿ ಎನ್ನುವ ಸತ್ಯಾಂಶ ತಿಳಿಸಿ.

ಶ್ರೀ ಬಿ. ರಾಮಯ್ಯ.—ನನ್ನ ಸಂಪೂರ್ಣವಾದ ಹೇಳಿಕೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಕೇಂದ್ರ ಸರ್ಕಾರದ ನೀತಿ ನಮ್ಮ ಸರ್ಕಾರದ ನೀತಿ ಎಲ್ಲಿ ಕುಡಿಯುವುದಕ್ಕೆ ಜನಗಳಿಗೆ ನೀರು ಇರುವುದಿಲ್ಲವೋ ಅಂತಹ ಕಡೆಗಳಲ್ಲಿ ಕೊನೆಯ ಪಕ್ಷ ಒಂದು ತೆರೆದ ಭಾವಿ ಅಥವಾ ಕೊಳವೆ ಭಾವಿಯನ್ನಾದರೂ ಮಾಡಿಕೊಡಬೇಕೆನ್ನುವ ಭಾವನೆ ಇದೆ. ಇದು ನೀರಿನ ಬಡಾವಣೆಯ ಯೋಜನೆಯ ಅಧ್ಯತೆಯಲ್ಲಿ ಕೊನೆಯ ಸ್ಥಾನದಲ್ಲಿದೆ ಎನ್ನುವ ಮಾತನ್ನು ಕೂಡ ಹೇಳಿದ್ದೇನೆ. ಪ್ರಪ್ರಥಮವಾಗಿ ೧ಸಾವಿರ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಹಿಂದೆ ವರ್ಷಕ್ಕೆ ೧೫೦,೨೦೦ ಯೋಜನೆಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಆದ್ದರಿಂದ ಸರ್ಕಾರ ಕುಡಿಯುವ ನೀರನ್ನು ಒದಗಿಸಲು ತೀವ್ರವಾಗಿ ಗಮನಹರಿಸುತ್ತದೆಂದು ಆದು ಸರ್ಕಾರದ ಪರಿಶೀಲನೆಯಲ್ಲಿದೆಂದು ಹೇಳಿದ್ದೇನೆ.

---

† Indicates that remarks or speeches have not been revised by the member concerned.

ಶ್ರೀ ಡಿ.ಟಿ, ಮಾಯಣ್ಣ.—ಬೋರ್‌ವೆಲ್ ಹಾಕಿದ್ದರೂ ಕೂಡ ನೀರು ಸಾಕಾಗುವುದಿಲ್ಲ, ಸರಿಯಾಗಿ ನೀರು ಬರುವುದಿಲ್ಲ ನೀರು ಜೇಕಾದರೆ ೩ ಮೈಲಿ ಹೋಗಬೇಕಾಗುತ್ತದೆ. ಹತ್ತಿರದಲ್ಲಿರುವ ಕೆರೆಯ ನೀರು ಸರಿಯಾಗಿಲ್ಲ. ಕುಡಿಯುವುದಕ್ಕೆ ಯೋಗ್ಯವಾಗಿರುವುದಿಲ್ಲ. ಕುಡಿಯುವ ನೀರನ್ನು ಬೇಗ ಒದಗಿಸಿ ಕೊಡಬೇಕೆಂದು ನಾನು ೧ ವರ್ಷದಿಂದ ಸತತವಾಗಿ ಹೇಳುತ್ತಿದ್ದೇನೆ.

ಶ್ರೀ ಬಿ ರಾಮಯ್ಯ.—ಮಾನ್ಯ ಸದಸ್ಯರ ಕಳಕಳಿ ಅರ್ಥವಾಗಿದೆ ಅದರ ಬಗ್ಗೆ ತೀವ್ರವಾದಂತಹ ಗಮನವನ್ನು ಕೊಡುತ್ತೇವೆ.

೩೧೨ನೇ ನಿಯಮದ ಮೇರೆಗೆ.—

ಸ್ಪೈಪೆಂಡಿಯರಿ ಪದವಿಧರರು ಕೈಕೊಂಡಿರುವ ಉಪವಾಸ ಮುಷ್ಕರ ಬಗ್ಗೆ.

†ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಈ ಸ್ಪೈಪೆಂಡರೀ ಪದವೀಧರರ ಬವಣೆ ಎಲ್ಲರಿಗೂ ಗೊತ್ತಿದೆ. ಕಳೆದ ೩-೪ ವರ್ಷಗಳಿಂದ ಇವರು ನಾನಾ ರೀತಿಯಲ್ಲಿ ತಮ್ಮ ಬವಣೆಯನ್ನು ಸರ್ಕಾರದ ಮುಂದೆ ನೇರವಾಗಿ ಮತ್ತು ಪರೋಕ್ಷವಾಗಿ ಇಟ್ಟಿದ್ದಾರೆ. ಸರ್ಕಾರ ಕೂಡ ಅನೇಕ ಸಂದರ್ಭಗಳಲ್ಲಿ ಅವರಿಗೆ ಸರಿಯಾದ ಉತ್ತರ ಕೊಟ್ಟು ಅವರ ಸಂಕಷ್ಟಗಳನ್ನು ಪರಿಹಾರ ಮಾಡುವ ಉತ್ತರವನ್ನು ಕೊಟ್ಟಿದೆ. ಮುಖ್ಯಮಂತ್ರಿಗಳಾದಿಯಾಗಿ ಸರ್ಕಾರದ ವಕ್ತಾರರು ಅನೇಕ ಸಂದರ್ಭಗಳಲ್ಲಿ ಇವರ ಬಗ್ಗೆ ಅನುಕಂಪ ತೋರಿಸಿದ್ದಾರೆ ಅವರ ಬೇಡಿಕೆಗಳ ಬಗ್ಗೆ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಅವರ ಬೇಡಿಕೆಗಳನ್ನು ಆದಷ್ಟೂ ಬೇಗ ಈಡೇರಿಸುವುದಾಗಿ ಸರ್ಕಾರದವರು ಹೇಳಿರುವುದು ಎಲ್ಲರಿಗೂ ಗೊತ್ತಿದೆ. ಈ ರೀತಿ ಹೇಳಿ ತಿಂಗಳುಗಳು ಮತ್ತು ವರ್ಷಗಳು ಉರುಳಿ ಹೋದರೂ ಸಹ ಇವರ ಸಮಸ್ಯೆ ಮಾತ್ರ ಬಗೆಹರಿಯಲಿಲ್ಲ. ಇದರಿಂದ ಇವರುಗಳು ನೆನ್ನೆ ಕೂಡ ಸತ್ಯಾಗ್ರಹ ಮಾಡಿದರು: ನಾವು ಹೋದ ಕಡೆಗಳಲ್ಲಿ ನಮಗೆ ಏನಾದರು ಮಾಡಿ ಮೋಕ್ಷ ಕಾಣಿಸಿ ನಮ್ಮನ್ನು ಏನಾದರು ಮಾಡಿ ತೀರದ ಕಡೆಗೆ ತೆಗೆದುಕೊಂಡು ಹೋಗಿ ನಿಲ್ಲಿಸಿ, ಇಲ್ಲದಿದ್ದರೆ ನಾವು ಕೊಚ್ಚಿಕೊಂಡು ಹೋಗುತ್ತೇವೆಂದು ಪೇಳಿದ್ದಾರೆ. ಆದರೆ ಸರ್ಕಾರದ ನೀತಿಯನ್ನು ಗಮನದಲ್ಲಿಟ್ಟು ಕೊಂಡು ನಾನು ಅವರಿಗೆ ಯಾವ ಭರವಸೆಯನ್ನೂ ಕೊಡುವ ಸ್ಥಿತಿಯಲ್ಲಿರಲಿಲ್ಲ. ನಾನು ಯಾವ ಭರವಸೆಯನ್ನು ಸಹ ಅವರಿಗೆ ಕೊಡಲಿಲ್ಲ. ಈಗ ಪರಿಸ್ಥಿತಿ ಕೊನೆಯ ಘಟ್ಟಕ್ಕೆ ಬಂದಿದೆ. ಅವರು ಮತ್ತೆ ಬೆಂಗಳೂರಿಗೆ ಬಂದು ಚಳುವಳಿ ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ಇದನ್ನು ಇದೇರೀತಿ ಮುಂದು ವರೆಸಿಕೊಂಡು ಹೋಗುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದ ಖಚಿತವಾದಂಥ ನಿಲುವೇನೆಂಬುದನ್ನು ತಿಳಿಸಬೇಕು. ಇವರ ಸಮಸ್ಯೆಯನ್ನು ಬಗೆಹರಿಸುವುದಿದ್ದರೆ ಯಾವಾಗ ಬಗೆಹರಿಸುತ್ತೀರಿ ಎಂಬುದನ್ನು ತಿಳಿಸಬೇಕು. ಸರ್ಕಾರದ ಧೋರಣೆಯ ವಿವರಗಳೇನೆಂಬುದನ್ನು ತಿಳಿಸಬೇಕು. ಈ ಮೂಲಕ ಇವರ ಒವಣೆಯನ್ನು ಸಂಪೂರ್ಣವಾಗಿ ಕೊನೆಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಸರ್ಕಾರದಲ್ಲಿ ಸಾವಿರಗಟ್ಟಲೆ ಹುದ್ದೆಗಳು ಖಾಲಿ ಇವೆ. ಕಳೆದ ಸಲ ಈ ಮಾತನ್ನು ಇಲ್ಲಿ ಸರ್ಕಾರದವರೇ ಹೇಳಿದ್ದಾರೆ. ಆದಕಾರಣ ಖಾಲಿ ಇರುವ ಈ ಹುದ್ದೆಗಳಿಗೆ ಈ ಪದವೀಧರರನ್ನು ನೇಮಕ ಮಾಡುವ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೇ ಎಂಬುದನ್ನು ತಿಳಿಸಬೇಕು. ಕೆಲವರ ವಯೋಮಿತಿ ಮೀರಿರುವ ಕಾರಣ ಹಾಗೂ ಇನ್ನೂ ನಾನಾ ರೀತಿಯ ಸಮಸ್ಯೆಗಳು ಇವರನ್ನು ಕಾಡಿಸುತ್ತಿವೆ, ಇವರನ್ನು ಈ ಮೊದಲು ಈ ಕೆಲಸಕ್ಕೆ ತೆಗೆದುಕೊಂಡಿದ್ದು ಸರಿಯೋ ಅಥವಾ ತಪ್ಪೋ ಏಂಬ ಬಗ್ಗೆ ತೀರ್ಮಾನ ಕೊಡುವ ಸ್ಥಿತಿಯಲ್ಲಿ ನಾವಿಲ್ಲ ಆ ವಿವರಗಳಿಗೆ ಈಗ ನಾನು ಹೋಗುವುದಿಲ್ಲ. ಮುಖ್ಯವಾಗಿ ಸರ್ಕಾರದವರು ಇವರಿಗೆ ಕೊಟ್ಟಿರುವ ಮಾತನ್ನು ನಡೆಸಿಕೊಡುವುದರ ಮೂಲಕ ಇವರ ಬವಣೆಯನ್ನು ಕೊನೆಗಾಣಿಸಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳುತ್ತಿದ್ದೇನೆ.

†ಶ್ರೀ ಜೆ. ಎಚ್. ಪಟೇಲ್ (ಚೆನ್ನಗಿರಿ).—ಮಾನ್ಯ ಅಧ್ಯಕ್ಷರೇ, ಈಗ ಮಂತ್ರಿಗಳ ಹೇಳಿಕೆ ನನ್ನ ಕೈಸೇರಿದೆ. ಇದನ್ನು ಈ ಮೊದಲೇ ಕೊಡಬಹುದಾಗಿತ್ತು. ಈ ಒಂದು ಹೇಳಿಕೆಯನ್ನು ಅವಲಂಬಿಸಿ ಹೇಳುವುದಾದರೆ.....

ಅಧ್ಯಕ್ಷರು.—ಅವರ ಹೇಳಿಕೆಯನ್ನು ಆ ಮೇಲೆ ಹೇಳುತ್ತಾರೆ.